ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**ಸಂಕೇತ ಸಂಖ್ಯೆ : 85-K**
**Code No. : 85-K**

# A

**CCE RR**
**REVISED**

Question Paper Serial No. **30**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**
**(ಹೊಸ ಪಠ್ಯಕ್ರಮ / New Syllabus)**
**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 23. 09. 2020 ] [ Date : 23. 09. 2020
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ಸಾಲ್‌ಬಾಯ್ ಒಪ್ಪಂದದೊಂದಿಗೆ ಕೊನೆಗೊಂಡ ಯುದ್ಧ

   (A) ಎರಡನೇ ಆಂಗ್ಲೋ–ಮರಾಠ ಯುದ್ಧ

   (B) ಎರಡನೇ ಆಂಗ್ಲೋ–ಸಿಖ್ ಯುದ್ಧ

   (C) ಮೊದಲನೇ ಆಂಗ್ಲೋ–ಮರಾಠ ಯುದ್ಧ

   (D) ಮೊದಲನೇ ಆಂಗ್ಲೋ–ಮೈಸೂರು ಯುದ್ಧ

2. 1938 ರ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದವರು

   (A) ಸರ್ದಾರ್ ವಲ್ಲಭಬಾಯಿ ಪಟೇಲ್

   (B) ಡಾ. ಬಿ.ಆರ್. ಅಂಬೇಡ್ಕರ್

   (C) ಬಾಲಗಂಗಾಧರ ತಿಲಕ್

   (D) ಸುಭಾಷ್ ಚಂದ್ರ ಬೋಸ್

3. 1789 ರ ಫ್ರಾನ್ಸಿನ ಮಹಾಕ್ರಾಂತಿಯ ಪ್ರಮುಖ ಉದ್ದೇಶ

   (A) ವಿಶ್ವಸಂಸ್ಥೆಯ ಸ್ಥಾಪನೆ

   (B) ಮಾನವ ಹಕ್ಕುಗಳ ಸಂರಕ್ಷಣೆ

   (C) ವಿದೇಶಿಯರ ಆಕ್ರಮಣ ತಡೆಯುವುದು

   (D) ರಾಷ್ಟ್ರ ಸಂಘದ ಸ್ಥಾಪನೆ

4. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು

(A) ಮೇಧಾ ಪಾಟ್ಕರ್

(B) ಡಾ. ಶಿವರಾಮ ಕಾರಂತ

(C) ಕುಸುಮಾ ಸೊರಬ

(D) ಸುಂದರಲಾಲ್ ಬಹುಗುಣ

5. ಮಕ್ಕಳ ಸಹಾಯವಾಣಿಗೆ ಕರೆ ಮಾಡಲು ಇರುವ ದೂರವಾಣಿ ಸಂಖ್ಯೆ

(A) 1098

(B) 1090

(C) 1089

(D) 1097

6. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದು

(A) ಆಂಧಿಸ್ – ಪಶ್ಚಿಮ ಬಂಗಾಳ

(B) ಕಾಲಬೈಸಾಕಿ – ಪಂಜಾಬ್

(C) ಮಾವಿನ ಹೊಯ್ಲು – ತಮಿಳುನಾಡು

(D) ಕಾಫಿಯ ಹೂಮಳೆ – ಕರ್ನಾಟಕ

7. 2014 ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ

(A) 0·586

(B) 0·344

(C) 0·562

(D) 0·856

8. 'ಬಿಳಿಕ್ರಾಂತಿಯ ಪಿತಾಮಹ' ಎಂದು ಪ್ರಖ್ಯಾತರಾದ ಉದ್ಯಮಿ

(A) ಡಾ. ಪ್ರತಾಪ್ ರೆಡ್ಡಿ

(B) ನಾರಾಯಣ ಮೂರ್ತಿ

(C) ವರ್ಗೀಸ್ ಕುರಿಯನ್

(D) ಅಜೀಮ್ ಪ್ರೇಮ್‌ಜಿ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 8 × 1 = 8

9. 1798 ರ ನಂತರ ಹೈದರಾಬಾದ್ ಸಂಸ್ಥಾನವು ತನ್ನ ಪ್ರಾಂತ್ಯದಲ್ಲಿ ಬ್ರಿಟಿಷರ ಒಂದು ಸೈನಿಕ ತುಕಡಿಯನ್ನು ಇರಿಸಿಕೊಳ್ಳಬೇಕಾಗಿತ್ತು. ಏಕೆ ?

10. ರಾಮಕೃಷ್ಣ ಮಠ (ಮಿಷನ್) ವನ್ನು ಏಕೆ ಸ್ಥಾಪಿಸಲಾಯಿತು ?

11. ಆಹಾರ ಮತ್ತು ಕೃಷಿ ಸಂಸ್ಥೆಯ ( FAO ) ಮುಖ್ಯ ಉದ್ದೇಶವೇನು ?

12. ಕೈಗಾ ಅಣುಸ್ಥಾವರ ವಿರೋಧಿ ಚಳುವಳಿಯನ್ನು ಏಕೆ ನಡೆಸಲಾಯಿತು ?

13. ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು ಹೇಗೆ ರಚನೆಯಾಗಿದೆ ?

14. ಜನಸಾಂದ್ರತೆಯನ್ನು ವ್ಯಾಖ್ಯಾನಿಸಿ.

15. ಒಂದು ದೇಶದ ತಲಾವರಮಾನವನ್ನು ಹೇಗೆ ಕಂಡುಹಿಡಿಯುತ್ತಾರೆ ?

16. ಪ್ರತಿ ವರ್ಷ ಮಾರ್ಚ್ 15ನೇ ತಾರೀಖಿನಂದು ವಿಶ್ವಗ್ರಾಹಕರ ದಿನವೆಂದು ಏಕೆ ಆಚರಿಸಲಾಗುತ್ತಿದೆ ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 8 × 2 = 16

17. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಯೂರೋಪಿಯನ್ನರನ್ನು ಪ್ರೇರೇಪಿಸಿದ ಅಂಶಗಳಾವುವು ?

18. ಭಾರತದ ವಿಭಜನೆಯ ಕಾಲದಿಂದಲೂ ನಿರಾಶ್ರಿತರು ಒಂದು ಬಹು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದಾರೆ. ಸ್ಪಷ್ಟೀಕರಿಸಿ.

19. ನಮ್ಮ ದೇಶದ ವಿದೇಶಾಂಗ ನೀತಿಯ ಬದಲಾವಣೆಗೆ ಹಲವಾರು ಅಂಶಗಳು ಪ್ರಭಾವ ಬೀರಿವೆ. ಹೇಗೆ ?

***ಅಥವಾ***

ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಸಚಿವ ಸಂಪುಟವೆಂದು ಏಕೆ ಪರಿಗಣಿಸಲಾಗಿದೆ ?

20. ಮಕ್ಕಳ ಸಾಗಾಣಿಕೆಯು ಅವರ ಸರ್ವತೋಮುಖ ಬೆಳವಣಿಗೆಗೆ ಮಾರಕವಾಗಿದೆ. ಹೇಗೆ ?

***ಅಥವಾ***

ಶ್ರಮ ವಿಭಜನೆಯು ಅತ್ಯಂತ ಉಪಯುಕ್ತವಾದದ್ದು. ಹೇಗೆ ?

21. ಭಾರತದ ಪೂರ್ವ ಕರಾವಳಿ ಮೈದಾನಗಳು ಪಶ್ಚಿಮ ಕರಾವಳಿ ಮೈದಾನಗಳಿಗಿಂತ ಹೇಗೆ ವಿಭಿನ್ನವಾಗಿವೆ ?

22. ಕೆಳಗಿನವುಗಳನ್ನು ವೈಯಕ್ತಿಕ ಸಂಪರ್ಕ ಮತ್ತು ಸಮುದಾಯ ಸಂಪರ್ಕಗಳ ಅಡಿಯಲ್ಲಿ ವಿಂಗಡಿಸಿ ಬರೆಯಿರಿ. (ಅಂಚೆ, ದೂರದರ್ಶನ, ಫ್ಯಾಕ್ಸ್, ಆಕಾಶವಾಣಿ)

23. ಸಾರ್ವಜನಿಕ ವೆಚ್ಚದ ಉದ್ದೇಶವು ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಸ್ಪಷ್ಟೀಕರಿಸಿ.

24. ವಿವಿಧ ಬ್ಯಾಂಕು ಖಾತೆಗಳನ್ನು ಹೆಸರಿಸಿ.

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $9 \times 3 = 27$

25. ಬ್ರಿಟಿಷರ ಭೂಕಂದಾಯ ಪದ್ಧತಿಗಳು ಭಾರತೀಯ ಕೃಷಿ ಮೇಲೆ ಪರಿಣಾಮ ಬೀರಿತ್ತು. ಸ್ಪಷ್ಟೀಕರಿಸಿ.

26. ಮೂರನೇ ಮತ್ತು ನಾಲ್ಕನೇ ಆಂಗ್ಲೊ–ಮೈಸೂರು ಯುದ್ಧಗಳು ಮೈಸೂರಿನ ಟಿಪ್ಪು ಸುಲ್ತಾನನ ಪ್ರಾಬಲ್ಯ ಕುಗ್ಗಿಸಿತು. ಸಮರ್ಥಿಸಿ.

***ಅಥವಾ***

ಭಾರತೀಯ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಅನಿಬೆಸೆಂಟ್‌ರವರ ಕೊಡುಗೆ ಅವಿಸ್ಮರಣೀಯವಾದದ್ದು. ಸಮರ್ಥಿಸಿ.

27. 20ನೇ ಶತಮಾನದಲ್ಲಿ ಚೀನಾ ಹೇಗೆ ಅಭಿವೃದ್ಧಿ ಹೊಂದಿತು ?

28. ಭಾರತ ಮತು ರಷ್ಯಾ ದೇಶಗಳು ಉತ್ತಮ ಬಾಂಧವ್ಯ ಹೊಂದಿವೆ ? ವಿವರಿಸಿ.

29. ಇತ್ತೀಚಿನ ದಿನಗಳಲ್ಲಿ ಅಸ್ಪೃಶ್ಯತೆಯ ಸಮಸ್ಯೆ ಕಡಿಮೆಯಾಗುತ್ತಿದೆ. ಸ್ಪಷ್ಟೀಕರಿಸಿ.

30. ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶಗಳು ಕಡಿಮೆಯಾಗುತ್ತಿವೆ. ಏಕೆ ?

31. ಬಹುತೇಕ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಒಡಿಸ್ಸಾ ಮತ್ತು ಪಶ್ಚಿಮ ಬಂಗಾಳದ ಪ್ರದೇಶಗಳಲ್ಲಿ ಕೇಂದ್ರಿಕೃತಗೊಂಡಿವೆ. ಏಕೆ ?

***ಅಥವಾ***

ಮಾನವ ಚಟುವಟಿಕೆಗಳು ಪ್ರವಾಹ ಮತ್ತು ಭೂಕುಸಿತಕ್ಕೆ ಕಾರಣವಾಗಿವೆ. ಸ್ಪಷ್ಟೀಕರಿಸಿ.

32. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಗುಣಲಕ್ಷಣಗಳನ್ನು ತಿಳಿಸಿ.

***ಅಥವಾ***

ಹಣದ ವಿಕಾಸದ ವಿವಿಧ ಹಂತಗಳನ್ನು ತಿಳಿಸಿ.

33. ಜಾಗತೀಕರಣವು ಒಂದು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?

***ಅಥವಾ***

ಉದ್ದಿಮೆಗಾರನು ಒಂದು ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯ ಮಾಡುತ್ತಾನೆ ?

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $4 \times 4 = 16$

34. ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳನ್ನು ವಿವರಿಸಿ.

35. 1857 ರ ಕ್ರಾಂತಿಗೆ ಕಾರಣವಾದ ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳನ್ನು ವಿವರಿಸಿ.

***ಅಥವಾ***

ಸ್ವಾತಂತ್ರ್ಯ ಚಳುವಳಿಯಲ್ಲಿ ಉದಾರ ರಾಷ್ಟ್ರೀಯ ವಾದದ ( Liberal Nationalism ) ಕಾಲವನ್ನು ವಿವರಿಸಿ.

36. ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿಯು ಮಹಿಳೆಯರು ಉತ್ತಮ ಸಾಧನೆ ಮಾಡಲು ಪೂರಕವಾಗಿವೆ. ಹೇಗೆ ?

37. ಗೋಧಿ ಹಾಗೂ ಕಬ್ಬು ಬೆಳೆಯಲು ಬೇಕಾಗಿರುವ ಅಗತ್ಯ ಅಂಶಗಳೇನು ?

VI. 38. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 4 = 5

a) $82\frac{1}{2}^{o}$ ಪೂರ್ವ ರೇಖಾಂಶ

b) ನರ್ಮದಾ ನದಿ

c) ಭಾಕ್ರನಂಗಲ್ ಯೋಜನೆ

d) ಮುಂಬೈ ಹೈ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಹೇಗೆ ಉಪಯುಕ್ತವಾಗಿವೆ ? 5